# ಮಾತೃಸ್ಮೃತಿ

ಮೂಲ ಬಂಗಾಳಿ : **ಲಾವಣ್ಯಕುಮಾರ್ ಚಕ್ರವರ್ತಿ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೨

ಅದಾದ ನಂತರ ಅನೇಕ ಮಾತುಕತೆಗಳಾದವು. ಮನೆ, ಕುಟುಂಬ ಇತ್ಯಾದಿ ವಿವರಗಳನ್ನೆಲ್ಲಾ ಅವರು ಕೇಳಿದರು. ನಾನು ಚಿಕ್ಕ ಮಗುವಾಗಿದ್ದಾಗಲೇ ನನ್ನ ತಾಯಿಯನ್ನು ಕಳೆದುಕೊಂಡಿದ್ದೆ ಎಂಬುದನ್ನು ಕೇಳಿ ಅವರು, 'ಅಯ್ಯೋ, ಮಗೂ' ಎನ್ನುತ್ತ ನನ್ನ ತಲೆಯ ಮೇಲೆ ಕೈಯಾಡಿಸುತ್ತ ಹೇಳಿದರು; ''ನಾನಂತೂ ನಿನ್ನ ತಾಯಿಯೇ ಆಗಿದ್ದೇನೆ ಮಗೂ'' ಎಂದರು. ನಾನು ಭಾವೋದ್ವೇಗಕ್ಕೆ ಒಳಗಾಗಿ ಕಂಪಿಸುವ ಧ್ವನಿಯಿಂದ, ''ಹೌದಮ್ಮಾ, ನನಗೆ ತಾಯಿ ಸಿಕ್ಕಿದ್ದಾಳೆ'' ಎಂದೆ.



ನಾನು ಹೊರಡುವಾಗ ಅವರೆಂದರು, ''ನೀನು ಇಲ್ಲಿರುವಷ್ಟು ದಿನವೂ, ಪ್ರತಿದಿನ ಒಂದು ಬಾರಿ ಇಲ್ಲಿಗೆ ಬಾ. ನನ್ನನ್ನು ನೋಡಲಾಗದಿದ್ದರೆ 'ಅಮ್ಮಾ, ಅಮ್ಮಾ' ಎಂದು ಕರೆದುಕೋ.'' ''ಆಗಲಿ, ಅಮ್ಮಾ'' ಎಂದು ನಿಧಾನವಾಗಿ ಅಲ್ಲಿಂದ ಹೊರಟೆ. ಮತ್ತೆ ಮತ್ತೆ ಹಿಂದಕ್ಕೆ ತಿರುಗಿ ನೋಡಿದೆ. ಶ್ರೀಮಾತೆಯವರು ನನ್ನ ಕಡೆಗೇ ನೋಡುತ್ತ ನಿಂತಿದ್ದರು. ಕಣ್ಣೀರು ಇಳಿಯುವಾಗ ಎದೆಯೊಡೆದು ಹೋದಂತಾಗಿತ್ತು. ನಾನು ಮತ್ತೆ ಶ್ರೀಮಾತೆಯವರ ಬಳಿಗೆ ಹೋಗಿ, ಅವರ ಮುಖವನ್ನೇ ನೋಡುತ್ತ ''ಹಾಂ, ಇನ್ನೂ ಸ್ವಲ್ಪ ಇದೆ'' ಎಂದೆ. ಶ್ರೀಮಾತೆಯವರು, ''ಅದೇನು ಮಗೂ?'' ಎಂದು ಕೇಳಿದರು.

''ಇನ್ನೇನು ಬೇಕು – ಅದು ನಿಮಗೆ ಗೊತ್ತಿಲ್ಲವೇ, ಅಮ್ಮಾ?''

ಶ್ರೀಮಾತೆಯವರು ಉತ್ತರ ಕೊಟ್ಟರು, ''ಗೊತ್ತು ಮಗೂ. ಆದರೆ ಇದು ಅನ್ನಪೂರ್ಣ–ವಿಶ್ವೇಶ್ವರರ ಇಲಾಖೆ. ನಿನಗೆ ಅದು ಕಲ್ಕತ್ತೆಯಲ್ಲಾಗುವುದು– ನಿರೀಕ್ಷೆಯಲ್ಲಿರು.''

ಇಲ್ಲಿ ಅಪ್ರಾಸಂಗಿಕವಾಗಿ ಇನ್ನೊಂದು ವಿಷಯವನ್ನು ಉಲ್ಲೇಖಿಸಲಾಗಿದೆ. ಮುಂದೆ ತಿಳಿದುಬಂತು, ಕಾಶಿಯಲ್ಲಿ ಶ್ರೀಮಾತೆಯವರು ಯಾರಿಗೂ ಮಂತ್ರದೀಕ್ಷೆ ನೀಡುತ್ತಿರಲಿಲ್ಲ ಎಂದು.

'ಆಗುತ್ತದೆ', 'ಆಗುತ್ತದೆ' ಎಂದಿದ್ದರು ಶ್ರೀಮಾತೆ; ಇನ್ನೇನು? ಆಗ ನನ್ನದು ಹುಣಿಸೇಮರದಡಿಯ ಭಕ್ತ ಶಾಂತಿರಾಮನ ಅವಸ್ಥೆ! ವೈಕುಂಠದಿಂದ ಮರಳಿ ಬಂದ ನಾರದ ಋಷಿಗಳು ಶಾಂತಿರಾಮನ ಪ್ರಾರ್ಥನೆಗೆ ಅನುಸಾರವಾಗಿ ಹೇಳಿದರು: ''ಈ ಹುಣಸೇಮರದಲ್ಲಿ ಎಷ್ಟು ಎಲೆಗಳಿವೆಯೋ ಅಷ್ಟು ಜನ್ಮಗಳಾದ ಮೇಲೆ ನಿನಗೆ ಮುಕ್ತಿ ದೊರಕುವುದು'' ಎಂದು. ಶಾಂತಿರಾಮನು ಆನಂದದಿಂದ ನರ್ತಿಸತೊಡಗಿದ – ಎಷ್ಟೇ ಜನ್ಮವಾದರೂ ಕಳೆಯಲಿ, ನನಗಂತೂ ಮುಕ್ತಿ ದೊರಕುವುದಲ್ಲ! ಗಾಂಜಾಖೋರ ಶಾಂತಿರಾಮನು ಹಾಡತೊಡಗಿದ, ನರ್ತಿಸತೊಡಗಿದ: ''ವೈಕುಂಠೇ ತೋರ್ ಭಿಜಲೋ ಗಾಂಜಾ, ಶಾಂತಿರಾಮ್ ತೂಯಿ ಬಗಲ್ ಬಾಜಾ'' (*'ವೈಕುಂಠಕ್ಕೆ ನಿನ್ನ ಗಾಂಜಾ ಕಳುಹಿಸಿದ್ದಾರೆ; ಶಾಂತಿರಾಮ, ನೀನು ಮಜಾ ಮಾಡು'*)

ಆದರೆ ದೊಡ್ಡ ರಸ್ತೆಗೆ ಇಳಿದುಬಿಟ್ಟಿದ್ದ ನನಗೆ ಭಾವಾಂತರವುಂಟಾಯಿತು. ನಾನು ಭಾವಿಸಿದೆ, ನಾನೆಂಥ ಮೂರ್ಖ! ಹಠ ಮಾಡಿ ಕೇಳಿದ್ದರೆ ಕರುಣಾಮಯಿ ಶ್ರೀಮಾತೆಯವರು ಇಂಥ ದಿನ, ಇಂಥ ಸಮಯಕ್ಕೆ ದೀಕ್ಷೆ ಪಡೆಯಲು ಬಾ ಎಂದು ಹೇಳುತ್ತಿದ್ದರೇನೋ!

ಮನಸ್ಸಿಗೆ ದುಗುಡವುಂಟಾಯಿತು. ಮತ್ತೆ ಅದೇ ವಿಶ್ವೇಶ್ವರನ ಗಲ್ಲಿಯಲ್ಲಿ , ಮತ್ತೆ ಅದೇ ಮಾಸ್ಟರ್ ಮಹಾಶಯರು! ಮತ್ತೆ ಅವರು ಅದೇ ರೀತಿ, ''ಓ, ಇಗೋ ಇಲ್ಲಿದ್ದಾನೆ'' ಎನ್ನುತ್ತ ಹೆಗಲ ಮೇಲೆ ಕೈಯಿಟ್ಟರು. ''ಶ್ರೀಮಾತೆಯವರ ದರ್ಶನವಾಯಿತೆ?'' ಎಂದು ಕೇಳಿದರು. ನಾನು ಎಲ್ಲವನ್ನೂ ಹೇಳಿದೆ. ಮನಸ್ಸಿನಲ್ಲಿ ಭಾವಾಂತರವುಂಟಾದ ಬಗ್ಗೆ ಕೂಡ ಹೇಳಿದೆ. ಮಾಸ್ಟರ್ ಮಹಾಶಯರು ಗಟ್ಟಿಯಾದ ಧ್ವನಿಯಿಂದ ಹೇಳಿದರು, ''ಸೂರ್ಯ ಚಂದ್ರರು ರಸಾತಲಕ್ಕಾದರೂ ಹೋಗಬಹುದು; ಭೂಮಿ ತಲೆ ಕೆಳಗಾಗಬಹುದು. ಆದರೆ, ಶ್ರೀಮಾತೆಯವರ ಮಾತು ವ್ಯರ್ಥವಾಗದು.'' ನನಗೆ ಮತ್ತೆ ಉತ್ಸಾಹವುಂಟಾಯಿತು. ಈಗಲೂ ನನ್ನ ಕಿವಿಯಲ್ಲಿ ಆ ಧ್ವನಿ ಮೊಳಗುತ್ತಿದೆ – ''ಸೂರ್ಯಚಂದ್ರರು ರಸಾತಲಕ್ಕಾದರೂ ಹೋಗಬಹುದು.. ಆದರೆ ಶ್ರೀಮಾತೆಯವರ ಮಾತು ವ್ಯರ್ಥವಾಗದು.''

ಸಂಜೆಯಾಗುತ್ತಿದ್ದಂತೆ, ಅದ್ವೈತ ಆಶ್ರಮದಲ್ಲಿ 'ಮ' ಅವರು ಪೂಜ್ಯ ಹರಿ ಮಹಾರಾಜರಿಗೆ ನನ್ನನ್ನು ತೋರಿಸಿ, ''ನಿನ್ನೆ ಹಾಗೂ ಇವತ್ತು ನಿನಗೆ ಆ ಘಟನೆಯ ಬಗ್ಗೆ ಹೇಳಿದ್ದೆನಲ್ಲ – ಅದು ಈ ಭಕ್ತನದೇ'' ಎಂದರು. ಹರಿ ಮಹಾರಾಜರು ನನ್ನತ್ತ ನೋಡಿ ನಗುತ್ತ, ''ಧನ್ಯ'' ಎಂದರು!

ಅನಂತರ ನಾನು ಸಮಯಕ್ಕೆ ಸರಿಯಾಗಿ ಊರಿಗೆ ಮರಳಿದೆ. ದೀಕ್ಷೆ ಪಡೆಯಲು ನನ್ನ ಜೀವ ತೀವ್ರವಾಗಿ ಹಂಬಲಿಸುತ್ತಿದ್ದರೂ, ನನ್ನ ಮನಸ್ಸಿನಲ್ಲಿ ಒಂದು ರೀತಿಯ ವಿಚಿತ್ರಭಾವನೆ ದೃಢವಾಗಿ ನಿಂತಿತ್ತು; ಏನೇ ಆದರೂ ದೀಕ್ಷೆಗಾಗಿ ಶ್ರೀಮಾತೆಯವರ ಬಳಿಗೆ ಹೋಗಲಾರೆ — ಎಂದು. ಶ್ರೀಮಾತೆ ಹೇಳಿದ್ದರು, 'ನಿನಗೆ ಕಲ್ಕತ್ತೆಯಲ್ಲಿ ಆಗುವುದು' ಎಂಬುದಾಗಿ. ಈ ಮಾತನ್ನು ವ್ಯರ್ಥಗೊಳಿಸಬೇಕು. ವಿಚಿತ್ರವಾದ ಹುಚ್ಚು! ಆದರೂ ಅದು ನನ್ನನ್ನು ಕಂಗೆಡಿಸಿಬಿಟ್ಟಿತು. ಭಕ್ತಕವಿ ರಾಮಪ್ರಸಾದನ ಭಾವನೆ, ''ನೋಡಮ್ಮಾ, ಸಾಧನೆಯ ಸಮಯದಲ್ಲಿ ನನ್ನ ತಾಯಿ ಸೋಲುವಳೋ, ಮಗ ಸೋಲುವನೋ'' ಎಂದು. ಇದರೊಂದಿಗೆ ಹೋಲಿಕೆ ಸರಿಹೊಂದದು, ನಿಜ. ಆದರೂ ನನ್ನ ಭಾವನೆ ಅದೇ ರೀತಿಯದು.

ಶ್ರೀಮಾತೆಯವರು ಕಲ್ಕತ್ತೆಗೆ ಬಂದ ಮೇಲೆ, ಅವರ ಆಗಮನದ ವಾರ್ತೆ ನನ್ನನ್ನು ಬಂದುಸೇರಿತು. ನನ್ನ ಪತ್ನಿ ಹಾಗೂ ನನ್ನ ಒಬ್ಬ ಆತ್ಮೀಯ ಸ್ನೇಹಿತನ (ಅವರು ಕೆಲವು ವರ್ಷಗಳ ಮೊದಲೇ ಶ್ರೀಮಾತೆಯವರಿಂದ ದೀಕ್ಷೆ ಪಡೆದಿದ್ದರು) ಒತ್ತಾಯ ಮಿತಿಮೀರಿದರೂ ನಾನು ಮಿಸುಕಾಡಲಿಲ್ಲ. ದಿನ ಕಳೆಯಿತು, ತಿಂಗಳೇ ಕಳೆಯಿತು. ಜೀವದಲ್ಲಿ ಬಡಬಾಗ್ನಿಯೆದ್ದಿದೆ. ಆದರೂ ನಾನು ನನ್ನ ನಿರ್ಧಾರಕ್ಕೆ ಕಟ್ಟುಬಿದ್ದಿದ್ದೆ.

ಅದು ೧೯೧೩ನೇ ಇಸವಿ. ದುರ್ಗಾಪೂಜೆಯ ಪಂಚಮಿಯ ದಿನ, ರಾತ್ರಿ ಕಳೆದು ಬೆಳಗಾಗುತ್ತಿದೆ. ಎಚ್ಚರಗೊಂಡಿದ್ದೆ; ಆದರೆ ಇನ್ನೂ ಕಣ್ಣುಗಳಲ್ಲಿ ನಿದ್ದೆಯ ಮಂಪರು ಉಳಿದಿತ್ತು. ಕಾಗೆ ಕೂಗುತ್ತಿತ್ತು – ಅದನ್ನೂ ಕೇಳಿಸಿಕೊಂಡಿದ್ದೆ. ಎಂದಿನ ಅಭ್ಯಾಸದಂತೆ ತಲೆದಿಂಬಿಗೆ ತಲೆಯನ್ನೊತ್ತಿ, ಭಗವಂತನ ಸ್ಮರಣೆ ಮಾಡುತ್ತ ನಿದ್ದೆಯ ಮಂಪರಿನಲ್ಲಿ ಮುಳುಗಿಹೋಗಿದ್ದೆ– ಅಷ್ಟರಲ್ಲಿ ಗಂಭೀರವಾದ ಧ್ವನಿ ಕೇಳಿಬಂತು, ''ಲಾವಣ್ಯ–ಲಾವಣ್ಯ–ಲಾವಣ್ಯ!'' ಎಂಬುದಾಗಿ. ಅಚ್ಚರಿಗೊಂಡ ನಾನು ಏಳಲಿಚ್ಛಿಸಿ ನೋಡಿದೆ, ನನ್ನ ತಲೆಯ ಭಾಗದಲ್ಲಿ ಮುಚ್ಚಿದ್ದ ಬಾಗಿಲ ಮೇಲೆ ಇಡಲಾಗಿದ್ದ ಭಾವಚಿತ್ರದ ಶ್ರೀರಾಮಕೃಷ್ಣರು ನನ್ನತ್ತ ನೋಡುತ್ತ ನಿಂತಿದ್ದಾರೆ! ಮಂದಸ್ಮಿತವಾದ ಮುಖಮಂಡಲ, ವರ–ಅಭಯ ಮುದ್ರೆಯ ಕೈಗಳು, ನಿಂತೇ ಸಮಾಧಿಸ್ಥವಾದ ಅದೇ ಮೂರ್ತಿ. ಪ್ರಣಾಮ ಮಾಡಲು ಅಥವಾ ಏನನ್ನಾದರೂ ಹೇಳಲು ಅವಕಾಶವೇ ಇರಲಿಲ್ಲ. ನಾನು ಆನಂದಗೊಂಡು, ಆಶ್ಚರ್ಯಚಕಿತನಾದೆ, ಸ್ತಬ್ಧನಾಗಿಬಿಟ್ಟೆ. ಅವರು ಸಮೀಪದ ಕೋಣೆಗೆ ಹೋಗುವ ಬಾಗಿಲಿನತ್ತ ಬೆರಳು ತೋರಿಸಿ, ''ನೋಡು'' ಎಂದರು. ಮಣ್ಣಿನಿಂದ ಎದ್ದ ಎರಡು ಕೈಗಳಲ್ಲಿ ಒಂದು ಹೆಸರನ್ನು ಕಂಡೆ– ಶೂನ್ಯದಲ್ಲಿ ಬರೆಯಲಾಗಿತ್ತು. ಬೆಂಕಿಯ ಮೂಲಕ ಬರೆದ ಆ ಬರಹ ಧಗಧಗಿಸುತ್ತಿತ್ತು. ಶ್ರೀರಾಮಕೃಷ್ಣರತ್ತ ನೋಡಿದಾಗ ಅವರೆಂದರು, ''ಈ ನಾಮವನ್ನು ಜಪ ಮಾಡುತ್ತ ಹೋಗು. ತಕ್ಕ ಸಮಯದಲ್ಲಿ ಬೀಜಮಂತ್ರವನ್ನು ಪಡೆಯುವೆ. ಯಾವುದು ನಾಮವೋ ಅದೇ ಆ ಭಗವಂತ – ಇದನ್ನು ತಿಳಿದುಕೋ. ನಾಮ ಮತ್ತು ನಾಮಿ ಅಭೇದ.''

ಅಷ್ಟರಲ್ಲಿ ನಾನು ಭಾವಪೂರಿತನಾಗಿ, ಶ್ರೀರಾಮಕೃಷ್ಣರಿಗೆ ಪ್ರಣಾಮ ಮಾಡಿದೆ. ಪ್ರಣಾಮ ಮಾಡಿ ಎದ್ದು ನೋಡಿದರೆ, ಅಲ್ಲಿ ಮತ್ತೆ ಶ್ರೀರಾಮಕೃಷ್ಣರು ಕಾಣಿಸಲಿಲ್ಲ. ಅವರು ಅಂತರ್ಧಾನರಾಗಿದ್ದರು.

ಆ ಹೆಸರು ಅಗ್ನಿವರ್ಣ ಎಂದು. ಅನೇಕ ಸಮಯದ ನಂತರ ದೇವೀ ಸ್ತೋತ್ರದಲ್ಲಿ ಒಂದೆಡೆ 'ತಾಮಗ್ನಿವರ್ಣಾಮ್' ಎಂಬುದಾಗಿ ಇದ್ದುದನ್ನು ಕಂಡುಕೊಂಡೆ.

ಅದೇ ಹೊತ್ತಿಗೆ ನನ್ನ ಚಿಕ್ಕಪ್ಪನ ಮಗ ಜೋರಾಗಿ ಬಾಗಿಲು ಬಡಿದು ಹೇಳಿದ, ''ಅಣ್ಣಾ, ನಾನು ಇಂಥ ಜಾಗಕ್ಕೆ ಹೋಗುತ್ತಿದ್ದೇನೆ.'' ನನ್ನ ನಿದ್ದೆಗೆ ಭಂಗವುಂಟಾಯಿತು. ಕನಸು ಮುಕ್ತಾಯಗೊಂಡಿತು!

ಆದರೆ ಕಲ್ಕತ್ತೆಯಲ್ಲಿ ಶ್ರೀಮಾತೆಯವರ ಬಳಿಗೆ ಹೋಗಲಾರೆ – ಈ ಹಠವನ್ನು ನಾನು ಬಿಡಲಿಲ್ಲ. ದಿನದ ನಂತರ ದಿನ, ತಿಂಗಳ ನಂತರ ತಿಂಗಳು ಕಳೆದುಹೋದವು. ಅನೇಕ ಸೆಳೆತಗಳ ನಡುವೆ ಒಂದು ವರ್ಷ ಕಳೆದೇಹೋಯಿತು. ನನ್ನ ಪತ್ನಿ ಹಾಗೂ ಸ್ನೇಹಿತರು ಒಂದೇ ಸವನೆ, ''ಶ್ರೀಮಾತೆಯವರ ಬಳಿಗೆ ಹೋಗು'' ಎಂದು ಒತ್ತಾಯಿಸುತ್ತಿದ್ದರು. ನಾನು ಗೊಂದಲಕ್ಕೊಳಗಾದೆ. ದುರ್ಗಾಪೂಜೆಯ ರಜೆ ಸಮೀಪಿಸುತ್ತಿದೆ; ಆಗಲೂ ಅವರ ಬಳಿಗೆ ಹೋಗಲು ಒತ್ತಾಯಿಸುವುದು ನಿಲ್ಲಲಿಲ್ಲ; ಹೋಗಲಾರೆ ಎಂಬ

ನನ್ನ ಹಠವೂ ನಿಲ್ಲಲಿಲ್ಲ. ದುರ್ಗಾಪೂಜೆಗೆ ಸ್ವಲ್ಪವೇ ದಿನವಿದ್ದಾಗ ನನ್ನ 'ನ ಯಯೌ ನ ತಸ್ಥೌ' ಎಂಬ (ಗೊಂದಲದ) ಅವಸ್ಥೆಯಲ್ಲಿ ಒಂದು ರೀತಿಯ ಒತ್ತಡಕ್ಕೆ ಒಳಗಾಗಿ, ಹಿಂದೆ ಹೇಳಿದ ಸ್ನೇಹಿತರ ಹಾಗೂ ಇನ್ನು ಕೆಲವು ಮಂದಿ ಭಕ್ತ-ಸ್ನೇಹಿತರ ಜೊತೆಗೆ ನಾನು ಹೊರಟೆ. ಹೊರಟೆ ಎಂದರೆ ಸರಿಯಾಗಲಾರದು; ಅವರೆಲ್ಲ ಒಬ್ಬ ಹುಚ್ಚನ ಕಾಲಿಗೆ ಸಂಕೋಲೆ ಹಾಕಿ ಎಳೆದುಕೊಂಡು ಹೋದಂತೆ ಕರೆದುಕೊಂಡು ಹೋದರು ಎನ್ನಬೇಕು.

೧೯೧೪ನೇ ಇಸವಿಯ ದುರ್ಗಾಷ್ಟಮಿಯ ದಿನದಂದು ಬೆಳಗಿನ ಹೊತ್ತು. ನನ್ನ ಆತ್ಮೀಯ ಸ್ನೇಹಿತರೊಂದಿಗೆ ಬಾಗ್‌ಬಜಾರಿನ 'ಶ್ರೀಮಾತೆಯವರ ಮನೆ' ('ಉದ್ಬೋಧನ ಕಾರ್ಯಾಲಯ') ಯನ್ನು ತಲುಪಿದೆ. ಒಳಹೊಕ್ಕ ಕೂಡಲೇ ಗಮನಿಸಿದೆ, ಎಡ ಭಾಗದ ಕೋಣೆಯಲ್ಲಿ ಹಾಗೂ ಅಕ್ಕಪಕ್ಕದಲ್ಲೆಲ್ಲ ಅನೇಕ ಮಂದಿ ಸ್ತ್ರೀ-ಪುರುಷ ಭಕ್ತರು ನೆರೆದಿದ್ದರು. ಶ್ರೀಮಾತೆ ಮೇಲಂತಸ್ತಿನ ದೇವರಕೋಣೆಯಲ್ಲಿ ಪೂಜೆ ಮಾಡುತ್ತಿದ್ದಾರೆ ಎಂದು ತಿಳಿದು ಬಂತು. ಪೂಜೆ ಮುಗಿದ ನಂತರ ಭಕ್ತರು ಒಬ್ಬೊಬ್ಬರಾಗಿ ಶ್ರೀಮಾತೆಯವರ ಪಾದಕಮಲಗಳ ದರ್ಶನ ಹಾಗೂ ಸ್ಪರ್ಶನ ಮಾಡುವರು. ಕೋಣೆಯ ಪೂರ್ವಭಾಗದಲ್ಲಿ ವಿಶಾಲ ದೇಹದಿಂದ ಕೂಡಿದ್ದ ಒಬ್ಬರು ಸಂನ್ಯಾಸಿಗಳು ಕುಳಿತಿದ್ದರು. ಪೂಜ್ಯ ಶರತ್ ಮಹಾರಾಜರು - ಸ್ವಾಮಿ ಶಾರದಾನಂದರು ನನ್ನತ್ತ ನೋಡಿ ಕೇಳಿದರು, ''ಎಲ್ಲಿಂದ ಬಂದುಬಿಟ್ಟೆ? ಮುಖ ನೋಡಿದರೆ ಪರಿಚಯವಿರುವಂತೆ ಕಾಣುತ್ತದೆ!''

ನಾನು ಉತ್ತರ ನೀಡಿದೆ: ''ಮಹಾರಾಜ್ ಕಲ್ಕತ್ತಾ ಅಥವಾ ಈ ಭಾಗಕ್ಕೆ ನಾನು ಮೊದಲ ಬಾರಿಗೆ ಬಂದಿದ್ದೇನೆ. ನೀವು ನಮ್ಮ ಕಡೆಗೆ ಎಂದೂ ಬಂದಿಲ್ಲ. ನಿಮಗೆ ಹೇಗೆ ಪರಿಚಯವಿರುವಂತೆ ಅನ್ನಿಸಿತೋ ಕಾಣೆ.''

ಅವರು ಸ್ವಲ್ಪ ಹೊತ್ತು ನನ್ನ ಮುಖವನ್ನೇ ನೋಡಿದರು. ಬಳಿಕ ಹೇಳಿದರು: ''ಹಾಂ, ಚೆನ್ನಾಗಿ ಪರಿಚಯವಿದೆ, ಕುಳಿತುಕೋ.'' ನಾನು ಅವರ ಮುಂದೆಯೇ ಕುಳಿತುಬಿಟ್ಟೆ.

ಅಷ್ಟರಲ್ಲಿ ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಭಕ್ತರಿಗೆ ಮೇಲಂತಸ್ತಿನಿಂದ ಆಹ್ವಾನ ಬಂತು. ಮಹಾರಾಜ್ ಅನೇಕ ಮಾತುಗಳನ್ನು ಆಡಿದರು. ಒಂದು ಸಲ ಹೇಳಿದರು, ''ನೀನು ಶ್ರೀಮಾತೆಯವರ ದರ್ಶನ ಮಾಡಲು ಬಂದಿದ್ದೀಯೆ. ಅವರಿಗೆ ಏನು ನೀಡುತ್ತೀಯಾ?'' ಅವರ ಬಳಿ ಇದ್ದ ಹಣವನ್ನು (ಆಗಿನ ಕಾಲದ ಶುದ್ಧ ಬೆಳ್ಳಿಯ ನಾಣ್ಯ) ಅವರು ಎಣಿಸಿ ನೋಡಿದರು. ಒಂದು ಸಣ್ಣ ಕಾಗದವನ್ನು ತೆಗೆದುಕೊಂಡು, ಅದರಲ್ಲಿ ಲೆಕ್ಕ ಬರೆದಿಟ್ಟರು. ನನ್ನ ಖರ್ಚು ಇತ್ಯಾದಿಗಳನ್ನೆಲ್ಲ ಕೇಳಿ ತಿಳಿದುಕೊಂಡ ನಂತರ ಅವರು ಒಂದು ರೂಪಾಯಿಯನ್ನು ನನ್ನ ಕೈಗೆ ಕೊಟ್ಟು ಹೇಳಿದರು, ''ಶ್ರೀಮಾತೆಯವರಿಗೆ ಹೇಳು, 'ಪೂಜೆಯ ನೈವೇದ್ಯಕ್ಕಾಗಿ ನಾನು ಏನನ್ನೂ ತರಲಿಲ್ಲ, ಅಮ್ಮಾ. ಈ ಹಣದಿಂದ ಸ್ವಲ್ಪ ಖರೀದಿಸಿ, ನೈವೇದ್ಯ ಮಾಡಿ' ಅಂತ. ಅವರು ಅದನ್ನು ಸ್ವೀಕರಿಸಿದರೆ, ನೀನು ಧನ್ಯನಾದೆ ಎಂದು ತಿಳಿದುಕೋ. ಸಾಮಾನ್ಯವಾಗಿ ತಾಯಿ ಹಣವನ್ನು ಸ್ವೀಕರಿಸುವುದಿಲ್ಲ.'' ನನಗೋ ತುಸು ಆತಂಕ, ಕಳವಳ. ಕೇವಲ ಒಂದು ರೂಪಾಯಿಯೇ! ನಿಜವಾಗಿ, ಐದು ರೂಪಾಯಿ ಕೊಟ್ಟಿದ್ದರೂ ಸಾಕಾಗುತ್ತಿತ್ತೋ ಇಲ್ಲವೋ! ಪೂಜ್ಯರಾದ ಶರತ್ ಮಹಾರಾಜರಿಗೆ ನನ್ನ ಮನಸ್ಸಿನ ಭಾವನೆ ಅರ್ಥವಾಗಿ, ಅವರೆಂದರು: ''ನೋಡು, ನೀನು ಮನೆಗೆ ಮರಳಿ ಹೋಗುವವರೆಗೂ ನಾನು ಲೆಕ್ಕಾಚಾರ ಹಾಕಿಬಿಟ್ಟಿದ್ದೇನೆ.'' ದಾರಿ ಖರ್ಚಿಗಾಗಿ ಅವರು ಇಪ್ಪತ್ತು ರೂಪಾಯಿಯಷ್ಟು ಹೆಚ್ಚಾಗಿ ಸೇರಿಸಿಬಿಟ್ಟಿದ್ದರು. ಆ ಕ್ಷಣದಲ್ಲೇ ಅವರು ಕಲ್ಕತ್ತೆಯಲ್ಲಿ ತಂಗಲು ಹಾಗೂ ಮರಳಿ ಹೋಗಲು ಬೇಕಾದ ಎಲ್ಲ ಖರ್ಚುಗಳನ್ನೂ ಲೆಕ್ಕ ಹಾಕಿ ಬರೆದುಕೊಂಡಿದ್ದರು. ಅವರೆಂದರು, ''ಹೆಚ್ಚು ಹಣ ಕೊಟ್ಟರೆ ಶ್ರೀಮಾತೆ ಪ್ರಸನ್ನರಾಗುವರೆ? ಹಣದಲ್ಲಿ ಪ್ರಸನ್ನತೆಯೆಂಬುದಿಲ್ಲ.'' ಎಷ್ಟೋ ದಿನಗಳಿಂದ ಪರಿಚಿತರೆಂಬಂತೆ ಶರತ್ ಮಹಾರಾಜರು ನನ್ನೊಂದಿಗೆ ಅತ್ಯಂತ ಆತ್ಮೀಯವಾಗಿ ಮಾತನಾಡುತ್ತಿದ್ದರು. ಅತ್ತ ಶ್ರೀಮಾತೆಯವರ ದರ್ಶನ ಮಾಡಲು ಹೋದವರೆಲ್ಲ ದರ್ಶನ ಮಾಡಿ, ಅವರಲ್ಲಿ ಹೆಚ್ಚಿನವರು ಪ್ರಣಾಮ ಮಾಡಿ ಮರಳಿ ಹೋಗುತ್ತಿದ್ದರು. ಅಧೈರ್ಯದಿಂದ ನಾನು ಎದ್ದೆ. ಕೊಟ್ಟಕೊನೆಗೆ ನಾನು - ಹೌದು, ಇನ್ನು ಯಾರೂ ಉಳಿದಿಲ್ಲ. ಮಹಾರಾಜರು ಬ್ರಹ್ಮಚಾರಿಗೆ ಹೇಳಿದರು, ''ಇವನನ್ನು ಕರೆದುಕೊಂಡು ಹೋಗು.'' ಎರಡು-ಮೂರು ಮೆಟ್ಟಿಲು ಏರಿದ ನಂತರ ಅವರು ಬ್ರಹ್ಮಚಾರಿಗೆ ಹೇಳಿದರು, ''ಶ್ರೀಮಾತೆಯವರಿಗೆ ಹೇಳು, ಇವನು ನಮಗೆ ಅತ್ಯಂತ ನಿಕಟವರ್ತಿ ಎಂಬುದಾಗಿ.''

ನಾನು ಆಶ್ಚರ್ಯಚಕಿತನಾದೆ- ಎಷ್ಟೊಂದು ಭಾಗ್ಯ ನನ್ನದು! ಆನಂದದಿಂದ ನನ್ನ ದೇಹದಲ್ಲಿ ರೋಮಾಂಚನವುಂಟಾಯಿತು. ನನ್ನ ಪ್ರಾಣಗಳಲ್ಲಿ ಭಾವಸಂಚಾರವುಂಟಾಗಿ, ಶ್ರೀಮಾತೆಯವರ ಪಾದಗಳ ಸಮ್ಮುಖದಲ್ಲಿ ಬಂದು ನಿಂತೆ. ಅಲ್ಲಿ ನಿಂತಿದ್ದ ನನ್ನನ್ನು ತೋರಿಸಿ ಬ್ರಹ್ಮಚಾರಿಗಳು ಶ್ರೀಮಾತೆಯವರಿಗೆ ಏನೋ ಹೇಳುತ್ತಿದ್ದರು. ಶರತ್ ಮಹಾರಾಜ್ ಏನು ಹೇಳಬೇಕೆಂದು ತಿಳಿಸಿದ್ದರೋ, ಅದನ್ನೇ ಹೇಳುತ್ತಿದ್ದಿರಬೇಕು. ಶ್ರೀಮಾತೆಯವರು ನನ್ನ ಕಡೆಗೆ ಪ್ರಸನ್ನವದನರಾಗಿ ನೋಡುತ್ತಿದ್ದುದನ್ನು ಕಂಡೆ.

ಶ್ರೀಮಾತೆಯವರ ಪಾದಕಮಲಗಳನ್ನು ನಮಸ್ಕರಿಸಿದೆ. 'ಬೆಟ್ಟದಾವರೆಯಂಥ ರಂಗಿನ ಪಾದಕಮಲಗಳು.' ಶರತ್ ಮಹಾರಾಜ್ ಆದೇಶಿಸಿದಂಥ ಮಾತನ್ನು ಅವರಿಗೆ ಹೇಳಿದೆ. ಶ್ರೀಮಾತೆಯವರು ಎರಡೂ ಕೈಗಳನ್ನು ಚಾಚಿ, ''ಕೊಡು ಮಗೂ, ಕೊಡು'' ಎಂದರು. ನನ್ನಿಂದ ಹಣವನ್ನು ಸ್ವೀಕರಿಸಿದರು. ಕೃತಾರ್ಥನಾದೆ ಎಂದುಕೊಂಡೆ.

ನಾನು ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ನಿಂತುಕೊಂಡಿದ್ದೆ; ನನ್ನ ಸ್ನೇಹಿತ ಶ್ರೀಮಾತೆಯವರಿಗೆ ನನ್ನ ಕುರಿತಾಗಿ ಹೇಳಿದ. ಕಾಶಿಯಲ್ಲಿ ನಾನು ದರ್ಶನ ಮಾಡಿದ ವಿಷಯವನ್ನೂ

ತಿಳಿಸಿದ. ಅದಕ್ಕೆ ಶ್ರೀಮಾತೆ ಹೇಳಿದರು, ''ನನಗೆ ನೆನಪಿದೆ. ಆದರೆ ಇವತ್ತು ಸಂಜೆಯ ಹೊತ್ತಿಗೆ ನಾನು ಬೇಲೂರು ಮಠಕ್ಕೆ ಹೋಗುತ್ತೇನೆ. ನೀವೂ ಕೂಡ ಅಲ್ಲಿಗೆ ಹೋಗಿ. ವಿಜಯದಶಮಿಯಂದು ನಾನು ಇಲ್ಲಿಗೆ ಮರಳಿ ಬರುತ್ತೇನೆ. ಮರುದಿನ ಬೆಳಿಗ್ಗೆ ನೀನು ಗಂಗೆಯಲ್ಲಿ ಸ್ನಾನ ಮಾಡಿ ಬಾ; ಎಲ್ಲ ಆಗಿಬಿಡುತ್ತದೆ.'' ನನ್ನ ಸ್ನೇಹಿತನಿಗೆ ಅವರು ಹೇಳಿದರು, ''ಅಂದು ಬೆಳಿಗ್ಗೆ ನಿನ್ನ ಸ್ನೇಹಿತನನ್ನು ಕರೆದುಕೊಂಡು ಬಾ.'' ನನ್ನ ಸ್ನೇಹಿತ ಸ್ವಲ್ಪ ಸಮಯದ ಮೊದಲೇ ಶ್ರೀಮಾತೆಯವರಿಂದ ದೀಕ್ಷೆ ಪಡೆದಿದ್ದ; ಇದನ್ನು ಮೊದಲೇ ಹೇಳಿದ್ದಾಗಿದೆ.

ಇದಾದ ಮೇಲೆ ಶ್ರೀಮಾತೆಯವರು ಕೇಳಿದ ಒಂದೆರಡು ಪ್ರಶ್ನೆಗಳಿಗೆ ಉತ್ತರ ನೀಡಿ, ಮತ್ತೆ ಪ್ರಣಾಮ ಮಾಡಿ, ಕೆಳ ಅಂತಸ್ತಿಗಿಳಿದು ಬಂದೆ. ಶ್ರೀಮಾತೆ ಹಣವನ್ನು ಸ್ವೀಕರಿಸಿದ್ದಾರೆ ಎಂದು ತಿಳಿದ ಶರತ್ ಮಹಾರಾಜರು ಆನಂದದಿಂದ, ''ಧನ್ಯ!'' ಎಂದರು. ಈ ಎರಡಕ್ಷರಗಳ ಸಣ್ಣ ಶಬ್ದವೇ ಸಾಕು, ನನ್ನ ಮನಸ್ಸಿನಲ್ಲಿ ಭಾವಸ್ಫುರಣೆಯನ್ನು ಉಂಟುಮಾಡಲು ಎಂದು ನನಗನ್ನಿಸಿತು.

ಹಿಂದೆ ಶ್ರೀಮಾತೆಯವರ ಚಿತ್ರಪಟವನ್ನು ನೋಡಿದ್ದೆ; ಹಾಗೂ ಕಾಶೀಧಾಮದಲ್ಲಿ ಅವರ ದರ್ಶನವನ್ನು ಹೊಂದಿದ್ದೆ. ಅದಾದ ನಂತರ ಶ್ರೀಮಾತೆಯವರನ್ನು ಸ್ಥೂಲದೇಹದಿಂದ ದರ್ಶನ ಮಾಡಿದ್ದು ಇದೇ ಮೊದಲು ಎನ್ನಬೇಕು. ಶರತ್ ಮಹಾರಾಜರು ಅತ್ಯಂತ ಗಂಭೀರ ಸ್ವಭಾವದವರು ಹಾಗೂ ಮಿತಭಾಷಿಗಳು ಎಂದು ಹಿಂದೆ ಕೇಳಿದ್ದೆ. ಅನಂತರ ಕೂಡ ಅವರು ಇತರರೊಂದಿಗೆ ಮಾತನಾಡುವಾಗಲೂ ವ್ಯವಹರಿಸುವಾಗಲೂ ಅದನ್ನು ಕಂಡು ತಿಳಿದಿದ್ದೆ ಕೂಡ. ಆದರೆ ನನ್ನದೆಂತಹ ಭಾಗ್ಯ! ನಾನು ಅವರ ಬಳಿ ಯಾವಾಗಲೂ ಬೇರೆ ರೀತಿಯಲ್ಲೇ ಇದ್ದೆ, ಅವರಿಗೆ ಅತ್ಯಂತ ಆತ್ಮೀಯರೆಂಬಂತೆ, ತುಂಬ ಮುಕ್ತಭಾವದಿಂದ ಇದ್ದೆ. ಆ ದಿನದಂದು ಸಂಜೆಯ ಹೊತ್ತಿಗೆ ಶಿಯಾಲ್ದಾ ಸ್ಟೇಶನ್ನಿನಿಂದ ಟ್ರೈನ್ ಇಳಿದು ಫುಟ್‌ಪಾತ್ ಮೂಲಕ ಬಾಗ್‌ಬಜಾರಿನಲ್ಲಿದ್ದ, 'ಶ್ರೀಮಾತೆಯವರ ಮನೆ' ಗೆ ಹೊರಟೆ. ರಸ್ತೆಯಲ್ಲಿ ಮಾಸ್ಟರ್ ಮಹಾಶಯ, ಶ್ರೀ 'ಮ' ಅವರ ಭೇಟಿಯಾಯಿತು. ಮಂದ ಬೆಳಕಿನಲ್ಲಿ ಕೂಡ ಅವರು ನನ್ನನ್ನು ಗುರುತಿಸಿ, ನನ್ನ ಹೆಗಲ ಮೇಲೆ ಕೈಯಿಟ್ಟು, ''ಓ! ಯಾವಾಗ ಬಂದೆ?'' ಎಂದು ಕೇಳಿದರು. ಒಂದೆರಡು ಮಾತುಗಳ ನಂತರ ಅವರು ಹೇಳಿದರು, ಅಂದು ಶ್ರೀಮಾತೆಯವರ ಮನೆಗೆ ಅನೇಕ ಮಂದಿ ಬಂದಿದ್ದಾರೆ– ರಾಧು, ಮನ್ಮಥ, ನಳಿನಿ, ಮಾಕು ಇತ್ಯಾದಿ. ಅಂದು ರಾತ್ರಿ ಅಲ್ಲಿ ತಂಗಲು ಸ್ಥಳ ದೊರಕದು ಎಂದರು. ಅವರ ಮನೆಯಿದ್ದುದು (ಶಾಲಾ ಕಟ್ಟಡ– ಮೊರ್ಟನ್ ಇನ್‌ಸ್ಟಿಟ್ಯೂಷನ್) ನಂ. ೫೦, ಆಮಹರ್ಸ್ಟ್ ಸ್ಟ್ರೀಟಿನಲ್ಲಿ.* ಶ್ರೀಮಾತೆಯವರಿಗೆ ಪ್ರಣಾಮ ಮಾಡಿದ ಬಳಿಕ ಅಲ್ಲಿಗೆ ಹೋಗಲು ಅವರು ಆದೇಶ ನೀಡಿದರು, ಅಥವಾ ಒತ್ತಾಯಿಸಿದರು.

ಬಾಗ್‌ಬಜಾರಿನ 'ಉದ್ಬೋಧನ ಕಾರ್ಯಾಲಯ'ವನ್ನು ತಲುಪಿದೆ. ಶರತ್ ಮಹಾರಾಜರನ್ನು ಭೇಟಿಯಾದ ನಂತರ, ಶ್ರೀಮಾತೆಯವರಿಗೆ ಪ್ರಣಾಮ ಮಾಡಿದೆ. ಮತ್ತೆ ಶರತ್ ಮಹಾರಾಜರ ಬಳಿಗೆ ಬಂದು, ಅವರ ಬಳಿ ಸ್ವಲ್ಪ ಹೊತ್ತು ಕುಳಿತೆ. ಅಂದು ರಾತ್ರಿ ಮಾಸ್ಟರ್ ಮಹಾಶಯರ ದೇವದುರ್ಲಭ ಆತಿಥ್ಯ ಹಾಗೂ ಸಾನ್ನಿಧ್ಯವನ್ನು ಅನುಭವಿಸಿ ನಾನು ಧನ್ಯನಾದೆ. ನನ್ನ ಅಂತರಂಗದಲ್ಲಿ ಅಂದಿನ ಆನಂದಮಯ ರಾತ್ರಿಯ ಸವಿನೆನಪು ಚಿರಕಾಲವೂ ಜಾಗರೂಕವಾಗಿದೆ.

ದುರ್ಗಾಪೂಜೆ ಮುಗಿದುಹೋಯಿತು. ಶ್ರೀಮಾತೆಯವರು ಬಾಗ್‌ಬಜಾರಿಗೆ ಮರಳಿದರು. ದುರ್ಗಾಪೂಜೆ ಮುಗಿದ ನಂತರ ಕೆಲವು ದಿನ ಶರತ್ ಮಹಾರಾಜರು ಬೇಲೂರು ಮಠದಲ್ಲಿದ್ದರು. ನಾವೂ ಅಲ್ಲಿದ್ದೆವು. ಆದರೆ ಶರತ್ ಮಹಾರಾಜರಿಗೆ ದೀಕ್ಷೆಯ ಬಗ್ಗೆ ತಿಳಿಸಲು ಅವಕಾಶವುಂಟಾಗಲಿಲ್ಲ. ಕೊನೆಗೆ ಆ ದಿನ ಬಂದೇಬಿಟ್ಟಿತು — ನನ್ನ ಪುನರ್ಜನ್ಮದ ದಿನ; ವಿಜಯದಶಮಿಯ ಮರುದಿನ ಬೆಳಿಗ್ಗೆ (೧೯೧೪).

*(ಮುಂದುವರಿಯುವುದು)*

* ಅಂದಿನ ಆಮ್‌ಹರ್ಸ್ಟ್ ಸ್ಟ್ರೀಟ್, ಇಂದು ರಾಜಾ ರಾಮ ಮೋಹನ ಸರಣಿ ಎಂದು ಬದಲಾಗಿದೆ. ಶ್ರೀ 'ಮ' ಅವರು ಮೊರ್ಟನ್ ಇನ್‌ಸ್ಟಿಟ್ಯೂಷನ್ನಿನ ಅಧ್ಯಕ್ಷರಾಗಿದ್ದರು. ಈ ವಿದ್ಯಾಲಯದ ನಾಲ್ಕನೇ ಮಹಡಿಯ ಕೋಣೆಯಲ್ಲಿ ಅವರು ವಾಸವಾಗಿದ್ದರು. ತುಳಸಿ ಹಾಗೂ ಹೂ, ಗಿಡ, ಮರಗಳಿಂದ ಕೂಡಿದ್ದ ತಾರಸಿಯಲ್ಲಿ ಬೆಳಿಗ್ಗೆ ಹಾಗೂ ಸಂಜೆ ಅವರು ಆಧ್ಯಾತ್ಮಿಕ ಸಾಧನೆ ಮಾಡುತ್ತಿದ್ದರು. ಅನೇಕ ಮಂದಿ ಭಕ್ತರು ಹಾಗೂ ಯುವಕರು ಅವರ ಬಳಿಗೆ ಹೋಗುತ್ತಿದ್ದರು. *(–ಸಂ)*

## ಶ್ರೀಮಾತೆಯವರ ಉಪದೇಶಗಳು



**ಶಿಷ್ಯ :** ಅಮ್ಮಾ, ಭಗವಂತನ ನಾಮ ಜಪ ಮಾಡಿದರೂ ಕೂಡ ಪ್ರಾರಬ್ಧ ಕರ್ಮ ಕ್ಷಯವಾಗದೆ?

**ಶ್ರೀಮಾತೆ :** ಪ್ರಾರಬ್ಧ ಕರ್ಮ ಫಲವನ್ನು ಅನುಭವಿಸಲೇಬೇಕು. ಆದರೆ ಭಗವಂತನ ನಾಮ ಜಪ ಮಾಡಿದರೆ ಏನಾಗುತ್ತದೆಂದರೆ, ಒಬ್ಬನ ಕಾಲು ಮುರಿದು ಹೋಗಬೇಕಾಗಿದ್ದಲ್ಲಿ ಒಂದು ಮುಳ್ಳು ಚುಚ್ಚಿ ಅದರ ಫಲ ಅನುಭವಿಸಿದಂತಾಗುತ್ತದೆ.

❋ ಜಗತ್ತಿನಲ್ಲಿ ಎಲ್ಲ ಅನರ್ಥಗಳ ಮೂಲ – ಹಣ. ಕೈಯಲ್ಲಿ ಹಣವಿದ್ದರೆ ಸಾಕು ಅದು ಆಸೆ ಹುಟ್ಟಿಸಿಬಿಡುತ್ತದೆ, ಎಚ್ಚರಿಕೆ!

*('ಶ್ರೀ ಶಾರದಾದೇವಿ ವಚನವೇದ', ಪು.೩೩೬–೪೯)*